



## ಶೀಬಾರ ದನಗಳ ಜಾತ್ರೆಗೆ ಮುರುಘಾ ಶರಣರ ಭೇಟಿ

ಚಿತ್ರದುರ್ಗ : ನಗರಕ್ಕೆ ಸಮೀಪದ ಶೀಬಾರದಲ್ಲಿ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ವತಿಯಿಂದ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ಮತ್ತು ಶ್ರೀ ಜಗದ್ಗುರು ಗುರುಪಾದ ಮುರುಘರಾಜೇಂದ್ರ ಮಹಾಸ್ವಾಮಿಗಳ ಸ್ಮರಣಾರ್ಥ 22-2-2020ರಿಂದ 10-03-22020ರವರಗೆ ಆಯೋಜಿಸಲಾಗಿರುವ 65ನೇ ವರ್ಷ ದನಗಳ ಜಾತ್ರೆಗೆ ಡಾ. ಶಿವಮೂರ್ತಿ ಮುರುಘಾ ಶರಣರು ಭೇಟಿ ನೀಡಿದರು.

ತುಮಕೂರು, ಬೆಂಗಳೂರು, ಮಾಗಡಿ, ಮಧುಗಿರಿ, ತಮಿಳುನಾಡು, ಆಂಧ್ರಪ್ರದೇಶ, ವದ್ದಿನಕಲ್, ಬಳ್ಳಾರಿ, ಹೊಸಪೇಟೆ ಮೊದಲಾದ ಕಡೆಗಳಿಂದ ಜರ್ಸಿ, ಗಿರ್‌ತಳಿ, ಅಮೃತ್‌ಮಹಲ್, ಹಳ್ಳಿಕಾರ, ಡಾಗಿ, ಮುದ್ರ ಸೇರಿದಂತೆ ಹಲವಾರು ತಳಿಗಳ ಸಾವಿರಕ್ಕೂ ಹೆಚ್ಚು ಜೊತೆ ರಾಸುಗಳು ಜಾತ್ರೆಯಲ್ಲಿ ಭಾಗವಹಿ ಸಿವೆ. ಅತಿಹೆಚ್ಚು ಎರಡು ಲಕ್ಷದ ಇಪ್ಪತ್ತು ಸಾವಿರಕ್ಕೆ ಮಾರಾಟವಾದ ರಾಸು ಸೇರಿದಂತೆ ಐವತ್ತು ಸಾವಿರದಿಂದ ಎರಡು ಲಕ್ಷದ ಅರವತ್ತು ಸಾವಿರದವರೆಗಿನ ಬೆಲೆಯುಳ್ಳ ಎತ್ತುಗಳು ಬಂದಿವೆ.

ಈ ಸಂದರ್ಭದಲ್ಲಿ ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಮುಖ್ಯಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ಕೆಇಬಿ ಷಣ್ಮುಖಪ್ಪ, ಗುತ್ತಿನಾಡು ಪ್ರಕಾಶ್, ಜಿ.ಎಂ.ಕುಮಾರ್, ಮುರುಗೇಶ್ ಮೊದಲಾದವರಿದ್ದರು.